ಅನುಷ್ಠಾನಗೊಳಿಸುತ್ತಿದೆ. ಸ್ವಯಂ ಉದ್ಯೋಗ ಕೈಗೆತ್ತಿಕೊಳ್ಳಲು ಅನುಕೂಲವಾಗುವಂತೆ ರಾಜ್ಯ ಸರ್ಕಾರವು ಕುಶಲಕರ್ಮಿಗಳಿಗೆ ತರಬೇತಿ ಹಾಗೂ ಉದ್ಯಮಶೀಲ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಂಡಿದೆ. ಇದರ ಹೊರತಾಗಿ ರಾಜ್ಯ ಸರ್ಕಾರವು ಭಾರಿ ಮತ್ತು ಮಧ್ಯಮ ನೀರಾವರಿ, ಸಣ್ಣ ನೀರಾವರಿ, ರಸ್ತೆ ಮತ್ತು ಸೇತುವೆ, ಕಟ್ಟಡ, ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಿಂದ ದಿನಗೂಲಿ ಉದ್ಯೋಗವನ್ನು ಸೃಜಿಸುತ್ತಿದೆ. ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ 2004–05 ನೇ ಸಾಲಿನಲ್ಲಿ 15.14 ಕೋಟಿ ಮಾನವ ದಿನಗಳನ್ನು ಸೃಜಿಸುವ ಗುರಿ ಹೊಂದಿದೆ. ವಿವಿಧ ಯೋಜನಾ ಕಾರ್ಯಕ್ರಮಗಳ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ದಿನಗೂಲಿ ಹಾಗೂ ಸ್ವಯಂ ಉದ್ಯೋಗ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

1609 (2159)ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಸರ್ಕಾರದ ವಿವಿಧ ಇಲಾಖೆಗಳಲ್ಲಿ 18.20 ವರ್ಷಕ್ಕೂ ಹೆಚ್ಚಿನ ಸಮಯದಿಂದ ಸೇವೆಯಲ್ಲಿರುವ ದಿನಗೂಲಿ ನೌಕರರು ಖಾಯಮಾತಿಯಾಗಿಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ. ಅವರುಗಳನ್ನು ಮಾನವೀಯತೆ ಆಧಾರ ಮೇರೆಗೆ ಖಾಯಮಾತಿ ಮಾಡಲು ಸರ್ಕಾರ ಯೋಚಿಸಿದೆಯೆ;

ಇ. ಹಾಗಿದ್ದಲ್ಲಿ, ಯಾವಾಗ ಖಾಯಮಾತಿ ಮಾಡಲಾಗುವುದು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಯವರು):

ಅ. ಹೌದು.

ಆ. ಮಾನವೀಯತೆಯ ಅಂಶವೂ ಸರ್ಕಾರದ ಆಲೋಚನೆಯಲ್ಲಿ ಸೇರಿದೆ.

ಇ. ಪ್ರಕರಣವು ಈಗ ಸುಪ್ರೀಂಕೋರ್ಟಿನ ಮುಂದಿದೆ.

1610(2097) ಶ್ರೀ. ನಿಂಗಪ್ಪ ಹೆಚ್. (ಕುಣಿಗಲ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ತುಮಕೂರು ಕವಲು ನಾಲಾ (ಹೇಮಾವತಿ ಯೋಜನೆಯ ಟಿ.ಬಿ.ಸಿ) ಅಭಿವೃದ್ಧಿಗೆ ಮತ್ತು ಪೂರ್ಣಗೊಳ್ಳಲು ಬೇಕಾಗುವ ಅವಧಿ ಮತ್ತು ಹಣ ಎಷ್ಟು :

ಆ. ಯಾವ ಅವಧಿಯೊಳಗಾಗಿ ಹೇಮಾವತಿ ಯೋಜನೆಯ ಟಿ.ಬಿ.ಸಿ ನಾಲಾ ಮಾರ್ಗವನ್ನು ಪರ್ಣಗೊಳಿಸಲಾಗುವುದು;

ಇ. ಹಾಗೆ ಪೂರ್ಣಗೊಳಿಸಿ ಕುಣಿಗಲ್ ದೊಡ್ಡಕೆರೆವರೆಗೆ ಸರಾಗವಾಗಿ ನೀರು ಹರಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ. ತುಮಕೂರು ಶಾಖಾ ನಾಲೆಯ ಅಭಿವೃದ್ಧಿ ಮತ್ತು ಪೂರ್ಣಗೊಳಿಸಲು ರೂ. 923.55 ಕೋಟಿಗಳ ಅವಶ್ಯಕತೆ ಇದ್ದು, ಸರಾಸರಿ ರೂ. 154.00 ಕೋಟಿಗಳ ಅನುದಾನದಂತೆ ತುಮಕೂರು ಶಾಖಾ ನಾಲೆಯ ಎಲ್ಲಾ ಕಾಮಗಾರಿಗಳನ್ನು 2010–11 ಕ್ಕೆ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಂಡಿದೆ.